
# ಅಮುಖ್ಯವಾದುದಕ್ಕೂ ಜಾಗ ಕೊಡುತ್ತಾ...

ಮಾಳವಿಕಾ ರಾಜ್ ನಾರಾಯಣ್





ಒಂದು ಮಗುವಿಗೆ ಮುರಿದ ಬಿಸ್ಕತ್ತು ಕೊಟ್ಟು ನೋಡಿ. ಅದು ಬಿಸ್ಕತ್ತು ಈಸಿಕೊಂಡರೂ ಮುರಿದು ಹೋಗಿರುವುದಕ್ಕೆ ಅದಕ್ಕೆ ಅಸಮಾಧಾನ ಇದ್ದೇ ಇರುತ್ತದೆ. ನನಗಂತೂ ಇಂತಹ ಸನ್ನಿವೇಶಗಳು ಚಾಕ್ ಪೀಸ್ಗಳು, ಕಾಗದದ ಹಾಳೆಗಳು, ಬಣ್ಣದ ಡಬ್ಬಗಳು, ಕುಂಚಗಳು ಮತ್ತು ಹಳೆಯ ದಿನ ಪತ್ರಿಕೆಗಳ ರೂಪದಲ್ಲಿ ಪ್ರತಿದಿನ ಎದುರಾಗುತ್ತಲೇ ಇರುತ್ತವೆ.

'ಟೀಚರ್... ಈ ಡಬ್ಬದಲ್ಲಿ ಎಲ್ಲಾ ಬಣ್ಣಗಳೂ ಇಲ್ಲ'

'ಟೀಚರ್... ಈ ಕಾಗದ ಹರಿದಿದೆ'

'ಟೀಚರ್... ಈ ಕ್ರೆಯಾನು ಮುರಿದಿದೆ'

'ಟೀಚರ್... ಈಚಾಕ್ ಪೀಸ್ ತುಂಬಾ ಸಣ್ಣದು, ನನಗೆ ದೊಡ್ಡದು ಬೇಕು'

'ಟೀಚರ್... ನನಗೂ ದೊಡ್ಡ ಬ್ರಶ್/ ಕುಂಚ ಕೊಡಿ.. ಅವಳಿಗೆ ಕೊಟ್ಟ ಹಾಗೆ'

ನಮ್ಮ ಬದುಕು ಎಲ್ಲ ಬಣ್ಣದ ಚೂರುಗಳಿರುವ ಪರಿಪೂರ್ಣವಾದ ಬಣ್ಣದ ಡಬ್ಬದ ಹಾಗೆ ಅಲ್ಲ. ಶಾಲೆಗಳಾದರೂ ಎಲ್ಲ ಬಗೆಯ ಕಾಲ್ಪನಿಕ ಸಮಾನತೆಯನ್ನು (ಯುಟೋಪಿಯನ್ ಈಕ್ವಾಲಿಟಿ) ಆಸ್ವಾದಿಸಲು ಇರುವವೇ ಅಥವಾ ಅಸಮಾನ, ಅಸಂಪೂರ್ಣವಾದ ಜಗತ್ತನ್ನು ಸಹಾನುಭೂತಿಯಿಂದ ಅರ್ಥೈಸಿಕೊಂಡು ಸ್ವೀಕರಿಸಲು ನಮ್ಮನ್ನು ಸಜ್ಜುಗೊಳಿಸಲು ಇರುವವೇ? ಕಲೆಯು ಪ್ರಶ್ನಿಸಲು ಮತ್ತು ನಮ್ಮಲ್ಲಿ ಮನೆ ಮಾಡಿರುವ ಗ್ರಹಿಕೆಯನ್ನು ಬದಲಾಯಿಸಲು ಹಾಗೂ, ಇತರರೊಂದಿಗೆ ಹಂಚಿಕೊಳ್ಳಲು ನೆರವಾಗುತ್ತದೆ.

ನಾವು ನಮ್ಮಲ್ಲಿ ಏನಿದೆಯೋ ಅದರಿಂದ ಸುಂದರವಾದ ವಸ್ತುಗಳನ್ನು ಮಾಡಲು ಮತ್ತು ನಮ್ಮ ಧ್ವನಿಯನ್ನೂ ಕೇಳಿಸುವ ಅಧಿಕೃತ ಪ್ರಯತ್ನ ಮಾಡುತ್ತೇವೆ. ಮಕ್ಕಳು ಇತರರೊಂದಿಗೆ ಕೆಲಸ ಮಾಡುವ ಸಾಮರ್ಥ್ಯ ಬೆಳೆಸಿಕೊಳ್ಳಲು ಮತ್ತು ತಮ್ಮ ಇತಿಮಿತಿಯಲ್ಲಿ ಕೆಲಸ ಮಾಡಲು ಉತ್ತೇಜನ ಸಿಗಲಿ ಎಂಬ ಉದ್ದೇಶದಿಂದ ನಾನು ನನ್ನ ತರಗತಿಯಲ್ಲಿ ಮಕ್ಕಳಿಗೆ ಪರಸ್ಪರ ಸಂವಹನ ಸಾಧಿಸುವ ಅವಕಾಶ ಮಾಡಿಕೊಡಲು ಪ್ರಯತ್ನಿಸುತ್ತಿರುತ್ತೇನೆ. ಮಕ್ಕಳು ವಾದಗಳನ್ನು, ಬಿಕ್ಕಟ್ಟುಗಳನ್ನು ಎದುರಿಸುವಂತೆ ಮಾಡಲು, ತಮ್ಮದೇ ಆದ ರೀತಿಯಲ್ಲಿ ವ್ಯವಹರಿಸಲು ಹಾಗೂ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅವರು ಸಮರ್ಥರಾಗಬೇಕು ಎಂಬುದು ಇದರ ಉದ್ದೇಶ. ಇಷ್ಟೆಲ್ಲ ನಡೆಯುವಾಗ ಅವರು ಸೃಜಿಸುವ ಕಲಾಪ್ರಕಾರ ಯಾವುದು? ಕೆಲವು ಗೀಚು ಗೆರೆಗಳಿರಬಹುದು, ಬಣ್ಣವನ್ನು ಎರಚಿರಬಹುದು, ಕೆಲವೊಮ್ಮೆ ಅವರ ಸುತ್ತಮುತ್ತಲಿನ ಪ್ರತಿಬಿಂಬ ಇರಬಹುದು, ಒಂದಿಷ್ಟು ವಿನ್ಯಾಸವಿರಬಹುದು, ಅವರ ನೆನಪಿನ ಸಿಂಚನಗಳಿರಬಹುದು ಮತ್ತು ಕಲ್ಪನೆಯ ಸಣ್ಣ ಕಿಡಿ ಇರಬಹುದು. ಇದು ವರ್ಣಮಾಲೆಯನ್ನು ಓದುವ, ಪದಗಳನ್ನು, ಕತೆಗಳನ್ನು ಕಲಿಯುವ, ವಾಸ್ತವ ಮತ್ತು ಇತಿಹಾಸವನ್ನು ಅರಿಯುವ, ಪರೀಕ್ಷೆಗಳನ್ನು ಬರೆಯುವ ಸಾಮರ್ಥ್ಯಕ್ಕೆ ಹೋಲಿಸಿದರೆ ಹೆಚ್ಚೇನೂ ಅಲ್ಲ. ಯಾವುದೋ ಚಟುವಟಿಕೆಗೋಸ್ಕರ, ಒಂದು ಬಣ್ಣದ ಡಬ್ಬಿಗಾಗಿ ಜಗಳವಾಡಿ ಕಾಲ ಕಳೆಯುವುದು, 'ಒಂದು ಸುರಕ್ಷಿತ ಉದ್ಯೋಗ ಮತ್ತು ನಿಯಮಿತ ಸಂಪಾದನೆ'ಯ ಮುಂದೆ ಖಂಡಿತವಾಗಿಯೂ ಅಮುಖ್ಯವೆನಿಸುತ್ತದೆ.

ಆದರೆ, ನನಗೆ ಅನಿಸುವುದೇನೆಂದರೆ, ಬೇರೆ ಬೇರೆ ಬಣ್ಣಗಳಿಗೆ, ಬೇರೆ ಬೇರೆ ರೂಪಗಳಿಗೆ, ಶಬ್ದಗಳಿಗೆ ಮತ್ತು ಸಂಸ್ಕೃತಿಗಳಿಗೆ ಅನಾವರಣಗೊಳ್ಳಲು ಬೇಕಾದಷ್ಟು ಅವಕಾಶ ಸಿಕ್ಕಿದರೆ, ಎಲ್ಲ ಬಗೆಯ ಧರ್ಮಗಳಲ್ಲಿ, ಎಲ್ಲ ಬಗೆಯ ಶರೀರಗಳಲ್ಲಿ ಮಕ್ಕಳು ಸೌಂದರ್ಯವನ್ನು ಕಾಣಬಲ್ಲರು ಮತ್ತು ವೈವಿಧ್ಯದಿಂದ ಕೆಲಸ ಮಾಡಬಲ್ಲರು ಎಂದು. ಒಂದು ವೇಳೆ ಬೆಕ್ಕಿನ ಚಿತ್ರ ಬಿಡಿಸುವುದು ಹೇಗೆ ಎಂದು ಮಕ್ಕಳಿಗೆ ಹೇಳಿಕೊಡದೇ ಇದ್ದರೆ, ಅವರು ತಮ್ಮದೇ ಆದ ರೀತಿಯಲ್ಲಿ ಆ ಚಿತ್ರ ಬಿಡಿಸಬಹುದು ಅದು ನಿಜವಾದ ಬೆಕ್ಕಿನಂತಿರದಿರಬಹುದು. ಅದು ಶಾಲಾ ಆವರಣದಲ್ಲಿ ಅಡ್ಡಾಡುವ ನೀಲಿ ಕಾಲಿನ ಬೆಕ್ಕಿನಂತೆಯೋ, ಅವರ ಮನೆಯ ಆಸುಪಾಸಿನಲ್ಲೆಲ್ಲೋ ಸುಳಿದಾಡುವ ಬೆಕ್ಕಿನ ಚಿತ್ರವನ್ನೋ ಬಿಡಿಸಬಹುದೆಂದು ಯೋಚಿಸಿ ಬೆರಗಾಗುತ್ತೇನೆ. ಸಾವಿರಾರು ವಿಧದ ಸಂಸ್ಕೃತಿ, ಪ್ರದೇಶಗಳನ್ನು ಪ್ರತಿನಿಧಿಸುವ ಸಾವಿರಾರು ಬೆಕ್ಕುಗಳ ವಿಭಿನ್ನ ಚಿತ್ರಗಳು, ಅವೂ ಬೆಕ್ಕುಗಳ ಚಿತ್ರಗಳೇ ಎಂದು ಮತ್ತೊಬ್ಬರಿಗೆ ಅನಿಸುವಂತೆ ಸಂವಹನ ಮಾಡುವುದು ಎಷ್ಟು ಸುಂದರವಾಗಿರುತ್ತದೆ. ಬರಿಯ ಕಲೆಯಲ್ಲ, ಅದು ಕಟ್ಟಿಕೊಡುವ ತಿಳಿವಳಿಕೆ ಮತ್ತು ಹಂಚುವ ಜ್ಞಾನ ಬಹಳ ಪ್ರಮುಖವಾಗುತ್ತದೆ. ಅದು ಸಾರ್ವತ್ರಿಕವಾಗಿ ವಿಲೀನಗೊಳ್ಳುವಂತೆ ಬೆಳೆದಾಗ, ವೈಯಕ್ತಿಕ ಅನುಭವವನ್ನು ಅರ್ಥಮಾಡಿಕೊಳ್ಳುವ ಈ ಪ್ರಯತ್ನಗಳಿಂದ ಕಲೆ ಹೊರಹೊಮ್ಮುತ್ತದೆ. ಮಕ್ಕಳ ಕಲೆಗೆ ಸಾರ್ವತ್ರಿಕತೆಯ ಈ ಗುಣವಿದ್ದು, ಅವರು ಬೆಳೆದು ವಯಸ್ಕರಾಗುತ್ತಾ ಹೋದಂತೆ ನಿಧಾನವಾಗಿ ಅದು ಮಾಸುತ್ತದೆ. ನಾವು, ವಯಸ್ಕರು, ನೋಡಲು ಮರೆತ ಪ್ರಪಂಚವನ್ನು ಕಾಣಲು ಅವರು ನಮಗೆ ನೆರವಾಗುತ್ತಾರೆ.




*Watercolour on paper by a Class 2 student, 2017*



*Group work by Class 3, 2017*

ತರಗತಿಗಳು ಕೇವಲ ಕೆಲವೇ ಬಗೆಯ ಕಲಿಕೆಗೆ ಅನುಕೂಲವಾಗಿರುತ್ತವೆ. ಮಕ್ಕಳು ತರಗತಿಯ ಚೌಕಟ್ಟಿನಿಂದ ಹೊರಬರಲು ಸಹಜವಾಗಿ ಹೊರಾಂಗಣದತ್ತ ಆಕರ್ಷಿತರಾಗುತ್ತಾರೆ. ಮಕ್ಕಳು ಶಾಲೆಯಲ್ಲಿ ಇರುವ ಬಹುತೇಕ ಹೊತ್ತು, ತರಗತಿಯು ಒಂದು ಭೌತಿಕ ಪೆಟ್ಟಿಗೆಯಂತೆ, ಅವರು ಅಲ್ಲಿಯೇ ಇದ್ದರೆ ಮಾತ್ರ ಅಲ್ಲಿಗೆ ಸೇರಿದವರು ಎಂಬ ಭಾವವನ್ನು ಹೇರುತ್ತಿರುತ್ತದೆ. ಮಕ್ಕಳ ಓಡಾಟಕ್ಕೆ ಕಡಿವಾಣ ಹಾಕಲು ಅತ್ಯಂತ ಸುಲಭವಾದ ಉಪಾಯವೆಂದರೆ, ಅವರನ್ನು ತರಗತಿಯ ಹೊರಗೆ 'ಅನಪೇಕ್ಷಿತ'ವಾಗಿ ಕಳುಹಿಸುವುದು. ಅಲ್ಲದೆ, ನಾವು ಬಹುತೇಕ ಮಂದಿ ಬೋಧಕರು ಕೆಲವೊಮ್ಮೆ, 'ತರಗತಿ ನಡೆಸಲು ತೊಂದರೆ ಕೊಟ್ಟರೆ ತರಗತಿಯಿಂದ ಹೊರಗೆ ಕಳುಹಿಸುವುದಾಗಿ ಹೇಳು'ವುದುಂಟು. ಮಕ್ಕಳು ಇದನ್ನು ಬೇಗ ಅರ್ಥಮಾಡಿಕೊಂಡಿರುತ್ತಾರೆ. ಇಷ್ಟೇ ಅಲ್ಲದೆ, ತರಗತಿಯಿಂದ ಹೊರ ಹೋಗಬೇಕು ಎಂಬ ತುಡಿತದಿಂದ ಮಕ್ಕಳು ತರಗತಿಯಲ್ಲಿ ಸುಮ್ಮನೆ ತಂಟೆ ಮಾಡಿ ತರಗತಿಯಿಂದ ಹೊರದಬ್ಬಿಸಿಕೊಳ್ಳುತ್ತಾರೆ. ಹೀಗೆ, ಯಾವುದೇ ವಿಷಯದ (ಸಬ್ಜೆಕ್ಟ್) ತರಗತಿ ವೇಳೆಯಲ್ಲಿಯೂ ಮಕ್ಕಳು ತರಗತಿಯಿಂದ ಹೊರಗಿರಲು ಬಯಸುವ ಕಾರಣ, ತರಗತಿಯನ್ನು ನಿಭಾಯಿಸುವುದು ಶಿಕ್ಷಕರಿಗೆ ಮತ್ತು ಸುಗಮಕಾರರಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತದೆ. ನನ್ನ ಕಲಾ ತರಗತಿಯಲ್ಲಿ ಪ್ರತಿಬಾರಿಯೂ ನನಗೆ ಈ ಅನುಭವವಾಗಿದ್ದರೂ, ಒಬ್ಬ ಕಲಾವಿದೆಯಾಗಿ ಅದು ಅಷ್ಟೇ ನನ್ನನ್ನು ಸೆಳೆಯುತ್ತದೆ. ಒಂದೊಂದು ತರಗತಿಯಲ್ಲಿ, ಕೆಲವು ಮಕ್ಕಳನ್ನು ಐದು ನಿಮಿಷ ನಾನೇ ಹೊರಗೆ ಕಳುಹಿಸುತ್ತೇನೆ. ಅದು ಶಿಕ್ಷೆಯ ರೂಪದಲ್ಲಿ ಅಲ್ಲ. ಬದಲಿಗೆ, ಹೊರಗಿನ ವಾತಾವರಣದಲ್ಲಿ ಅಡ್ಡಾಡುವ ಸ್ವಾತಂತ್ರ್ಯವನ್ನು ಅವರಿಗೆ ಕೊಡುವ ಉದ್ದೇಶದಿಂದ. ಆದರೆ ನಾನು ಅವರನ್ನು ಶಿಕ್ಷಿಸುತ್ತಿದ್ದೇನೆ ಎಂದು ಅವರು ಭಾವಿಸುವುದುಂಟು. ತರಗತಿಯಲ್ಲಿ ತಂಟೆ ಮಾಡಿದ ಕಾರಣಕ್ಕಾಗಿ, ಇತರರನ್ನು ಬೈಯುವುದು, ಹೊಡೆಯುವುದನ್ನು ತಪ್ಪಿಸಲು ಆ ಮಕ್ಕಳನ್ನು ಹೊರಗೆ ಕಳುಹಿಸುವ ಪ್ರಯತ್ನ ಮಾಡಿದ್ದುಂಟು. ಅಲ್ಲದೆ, ಅವರನ್ನು ಗಮನಿಸಿದಾಗ, ಹೊರಗೆ ಕೆಲಕಾಲ ಅಡ್ಡಾಡಿಕೊಂಡು ತಾವಾಗಿ ಹಿಂತಿರುಗಿದ ಬಳಿಕ ತರಗತಿಯ ಅವಧಿಯುದ್ದಕ್ಕೂ ಅವರು ತುಂಬ ಶಾಂತವಾಗಿರುವುದನ್ನು ಕಂಡಿದ್ದೇನೆ. ಒಂದು ಸಲ, ಹಾಗೆ ಹೊರಹೋಗಿದ್ದ ಒಬ್ಬ ವಿದ್ಯಾರ್ಥಿ ಬಾಗಿಲಿನ ಮೂಲಕ ಒಳಬರುವ ಬದಲು ಕಿಟಕಿಯ ಮೂಲಕ ಒಳನುಗ್ಗಲು ಯತ್ನಿಸಿದ್ದ. ಮತ್ತೊಬ್ಬ ವಿಶೇಷ ವಿದ್ಯಾರ್ಥಿ. ಹೊರಗೆ ಇದ್ದ ಬೆಕ್ಕನ್ನು ನೋಡಲು ಕಿಟಕಿಯ ಮೇಲೆ ಹತ್ತಿ ಹೊರಹೋಗಲು ಯತ್ನಿಸಿದ್ದ. ಆ ಕಿಟಕಿಗಳಂತೂ ಅಷ್ಟೇನೂ ಎತ್ತರವಿಲ್ಲದೇ ಇದ್ದ ಕಾರಣ ಅವರಿಗೆ ಹೋಗಲೂ– ಒಳಬರಲೂ ಅಪಾಯಕಾರಿಯಾಗಿರಲಿಲ್ಲ. ಅಲ್ಲದೆ, ಅವರ ಆ ನಡವಳಿಕೆಯನ್ನು ಆಕ್ಷೇಪಿಸಲು ಸೂಕ್ತ ಕಾರಣ ನನ್ನಲ್ಲಿರಲಿಲ್ಲ. ಯಾಕೆಂದರೆ, ಅವರ ಸಾಹಸ ಮನೋಭಾವ, ಸ್ವಾತಂತ್ರ್ಯದ ಹಂಬಲ ಮತ್ತು ಆಟವಾಡುವ ಮನಸ್ಥಿತಿಯನ್ನು ಕಂಡು ನನಗೆ ಖುಷಿಯಾಗುತ್ತಿತ್ತು. ಈ 'ತರಗತಿ ಕೋಣೆಯಿಂದ ತಪ್ಪಿಸಿಕೊಳ್ಳು'ವುದನ್ನು ವಿಭಿನ್ನವಾಗಿ ಮಾಡುವಂತಿದ್ದರೆ ಎಂದು ನಾನು ಬೆರಗಾಗುತ್ತಿದ್ದೆ. ಒಮ್ಮೆ ನನ್ನ ತರಗತಿಯಲ್ಲಿ ಕೊಟ್ಟಿದ್ದ ಕೆಲಸವನ್ನು ಬೇಗನೆ ಮುಗಿಸಿದ ಕೆಲವು ಮಕ್ಕಳು ಇತರರೊಂದಿಗೆ ಮಾತನಾಡಲಾರಂಭಿಸಿದಾಗ, ಅವರನ್ನು ಹೊರ ಹೋಗಿ ಗಿಡಮರಗಳನ್ನು ನೋಡುತ್ತಾ ಕಾಲ ಕಳೆದು ಬರುವಂತೆ ಕಳುಹಿಸಿದ್ದೆ. ಇದರಿಂದ ಏನಾಯಿತೆಂದರೆ,'ಗಿಡಗಳನ್ನು ನೋಡಲು' ತರಗತಿಯಿಂದ ಹೊರಹೋಗುವ ಅವಕಾಶವನ್ನು ಪಡೆಯಲೋಸುಗ



*Leaf drawing and patterning exercise with pencil and sketch-pens on paper by a Class 5 student, 2017*

ಉಮೇದಿನಿಂದ ಇನ್ನಷ್ಟು ಮಕ್ಕಳು ತಮ್ಮ ಕೆಲಸವನ್ನು ಬೇಗನೆ ಮುಗಿಸಿದರು! ರಚನಾತ್ಮಕ ವಾತಾವರಣವನ್ನು ಒಡೆದು ಹೊರಬಂದು, ಆಟವಾಡುವ, ಕಲ್ಪನೆ ಮತ್ತು ಸೃಜನಶೀಲತೆಯನ್ನು ಪೋಷಿಸುವ ಅಪಾಯವನ್ನು ತೆಗೆದುಕೊಳ್ಳುವ ಪ್ರವೃತ್ತಿ ಇದಾಗಿದೆ.

ತರಗತಿಯ ಕ್ರಮಕ್ಕೆ 'ಅಡ್ಡಿಪಡಿಸುವ', ಬಂಡಾಯದ ಮಕ್ಕಳು ಹೀಗೆ ಕೆಲಸ ಮಾಡಿದ ಅನುಭವ ನನ್ನ ಕುತೂಹಲವನ್ನು ಕೆರಳಿಸಿವೆ. ಅವರ ಇದೇ ಶಕ್ತಿಯನ್ನು, ಅವರ ಆಸಕ್ತಿಯನ್ನು ನಿಜವಾಗಿಯೂ ಸೆಳೆಯುವ ಚಟುವಟಿಕೆಗಳು ಅಥವಾ ಆಲೋಚನೆಗಳ ನೆಲೆಯಲ್ಲಿ ಕೆಲಸ ಮಾಡಲಿಕ್ಕಾಗಿ ಒಯ್ಯಲು ಅವರನ್ನು ಎಚ್ಚರಿಕೆಯಿಂದ ಮುಂದೆ ತಳ್ಳುವುದು ನನಗೆ ದೊಡ್ಡ ಸವಾಲು. ಹೀಗೇ ಮಾಡುವುದರಿಂದ ಅವರು ಸ್ವಯಂಪ್ರೇರಿತರಾಗಿ ತಮಗಿಷ್ಟವಾದ ಮಾದರಿಯಲ್ಲಿ ಕಲಿಕೆಯನ್ನು ಮುಂದುವರಿಸಲು ಸಾಧ್ಯವಾಗಬಹುದು. ತರಲೆ ಮಾಡದ ಮಕ್ಕಳನ್ನು 'ವಿಧೇಯ' ಎಂಬ ಮನೋಭಾವದಿಂದ ಹೊರತಂದು, ಆರೋಗ್ಯಕರ ಪ್ರಶ್ನೆಗಳನ್ನು ಕೇಳುವ ಮತ್ತು ಕಂಡು ಕೊಳ್ಳುವ ವಲಯದತ್ತ ಎಳೆದು ತರುವ ಉದ್ದೇಶದಿಂದ ಅವರು ಕೆರಳುವಂತೆ ಕೂಡ ನಾನು ವರ್ತಿಸುತ್ತೇನೆ. ಉದಾಹರಣೆಗೆ, ವಿಶೇಷವಾಗಿ, ಐದನೇ ಮತ್ತು ಆರನೇ ತರಗತಿಯ ಕೆಲವು ಮಕ್ಕಳು ಪರಿಕಲ್ಪನೆಗಳನ್ನು ತ್ವರಿತವಾಗಿ ಗ್ರಹಿಸುತ್ತಾರೆ, ಸುಶಿಕ್ಷಿತ ಕುಟುಂಬದಿಂದ ಬಂದ ಈ ಮಕ್ಕಳು ತಮ್ಮ ಸಾಮರ್ಥ್ಯ ಮತ್ತು ಕೌಶಲಗಳನ್ನು ಸಾಬೀತುಪಡಿಸಲು ಯಾವುದಾದರು ಪುಸ್ತಕದಿಂದ ಚಿತ್ರಗಳನ್ನು ನೋಡಿ ಬರೆದು, ಸ್ಫುಟವಾಗಿ ಬಣ್ಣ ತುಂಬುತ್ತಾರೆ. ನಾನು ಅವರ ಕೌಶಲಗಳನ್ನು ಮೆಚ್ಚಿಕೊಂಡರೂ ವೈಯಕ್ತಿಕ ಕಲ್ಪನೆಗಳು ಮತ್ತು ಅಭಿವ್ಯಕ್ತಿಯ ಬಗ್ಗೆ ಮತ್ತು ಅದನ್ನು ದಕ್ಕಿಸಿಕೊಳ್ಳುವ ಬಗ್ಗೆ ಅವರೊಂದಿಗೆ ಚರ್ಚಿಸುತ್ತೇನೆ. ಅವರಲ್ಲಿ ಪ್ರತಿಯೊಬ್ಬರ ದೃಷ್ಟಿಕೋನಗಳೂ ವಿಭಿನ್ನ ಸತ್ತ್ವವನ್ನು ಹೊಂದಿದ್ದು, ಅವರದೇ ಬೌದ್ಧಿಕ ಬೆಳವಣಿಗೆಗೆ ಮತ್ತು ಅವರ ಸಂಸ್ಕೃತಿಯ ದೃಷ್ಟಿಯಿಂದ ಅದು ಪ್ರಯೋಜನಕಾರಿಯಾಗಿರುತ್ತದೆ. ಈ ಸಂವಾದಗಳು ಅವರ ಆತ್ಮವಿಶ್ವಾಸದ ಮೇಲೆ ಧನಾತ್ಮಕ ಪರಿಣಾಮ ಬೀರಿ, ಹೊಸದನ್ನು ಯತ್ನಿಸುವ ಉಮೇದನ್ನು ತುಂಬುವಂತೆ ಕಾಣುತ್ತದೆ. ಇದು ಮುಂದೆ, ಅವರು ತಮಗೆ ಸಂಬಂಧಿಸಿದ ವಸ್ತುಗಳಿಗೆ ಮೌಲ್ಯಕಟ್ಟುವ ಧೋರಣೆಯ ಮೇಲೂ ಪರಿಣಾಮಬೀರುತ್ತದೆ. ಆಗ, ಕಲಾತರಗತಿಯಲ್ಲಿ ನಾವು ಯಾಕೆ ದಿನಪತ್ರಿಕೆಗಳನ್ನು ಮರುಬಳಕೆ ಮಾಡುತ್ತೇವೆ ಎಂಬ ಬಗ್ಗೆ, ಬಳಸಲಾಗದ ಸ್ಕೆಚ್ ಪೆನ್ನುಗಳಿಂದ ಹೊಸ ವಸ್ತುಗಳನ್ನು ತಯಾರಿಸಿ ಹೇಗೆ ಬಳಸಬಹುದು ಎಂಬ ಬಗ್ಗೆ ಹಾಗೂ ಪ್ರಜ್ಞಾಪೂರ್ವಕವಾಗಿ ಮಾಡುವ ಪ್ರತಿಯೊಂದು ಕೆಲಸವೂ ಪರಿಸರ ಸಂರಕ್ಷಣೆಗೆ ಹೇಗೆ ದೇಣಿಗೆಯಾಗುತ್ತದೆ ಎಂದು ಚರ್ಚಿಸುತ್ತೇವೆ.

ಒಂದು ದಿನ ನಾನು 'ನೀವು ಯಾಕೆ ಚಿತ್ರ ಬಿಡಿಸುತ್ತೀರಿ?' ಎಂದು ಐದನೇ ತರಗತಿಯಲ್ಲಿ ಪ್ರಶ್ನಿಸಿದೆ.

'ಆ ಮೂಲಕ ನಾವು ಚಿತ್ರ ಬಿಡಿಸುವುದನ್ನು ಕಲಿಯುತ್ತೇವೆ' ಎಂದು ಒಬ್ಬ ವಿದ್ಯಾರ್ಥಿ ಉತ್ತರಿಸಿದ.

'ಅದು ನಿಮ್ಮ ಬದುಕಿಗೆ ಹೇಗೆ ಸಹಾಯ ಮಾಡುತ್ತದೆ?' ಎಂದು ಕೇಳಿದೆ.



*Collage on paper by  Class 6 students, 2017*

'ನೀವು ಪ್ರಶ್ನೆ ಮೇಲೆ ಪ್ರಶ್ನೆ ಕೇಳುತ್ತಿದ್ದೀರಿ ಟೀಚರ್' ಎಂದು ಒಬ್ಬ ವಿದ್ಯಾರ್ಥಿ ದೂರಿದ.

'ಚಿತ್ರ ಬಿಡಿಸಲು ಕಲಿತರೆ ನಾವು ಹಣ ಸಂಪಾದಿಸಬಹುದು... ಚಲನಚಿತ್ರದ ಭಿತ್ತಿಪತ್ರಗಳನ್ನು ನಾನು ನೋಡಿದ್ದೇನೆ. ಅದರಿಂದ ಅವರು ಹಣ ಸಂಪಾದಿಸುತ್ತಾರೆ' ಎಂದು ಇನ್ನೊಬ್ಬ ಹೇಳಿದ.

'ನೀನು ನೋಡಿದ ಆ ಭಿತ್ತಿಪತ್ರ ಎಷ್ಟು ದೊಡ್ಡದಿತ್ತು? ಎಷ್ಟು ಅಡಿ ಅಥವಾ ಮೀಟರ್ ಇದ್ದಿರಬಹುದು ಎಂದು ಅಂದಾಜಿಸಬಲ್ಲೆಯಾ?" ಎಂದು ಪ್ರಶ್ನಿಸಿದೆ.

'ಇಷ್ಟು ದೊಡ್ಡದು, ಎಂದು ಕೈಗಳನ್ನು ಅಗಲಿಸಿ ತೋರಿಸಿ, 'ಅದು

ಎಷ್ಟು ಅಡಿ ಇತ್ತು ಎಂದು ಹೇಳಲಾರೆ' ಎಂದ.

'ಈ ಗೋಡೆಯಷ್ಟು ದೊಡ್ಡದಿತ್ತೇ? ನಿಮ್ಮ ತರಗತಿಯು ಎಷ್ಟು ದೊಡ್ಡದಿರಬಹುದು?'

'೫೦ ಅಡಿ' ಎಂದು ಒಬ್ಬ ಹೇಳಿದ.

'ಇಲ್ಲ ೨೦ ಅಡಿ' ಎಂದು ಇನ್ನೊಬ್ಬ.

'೧೦೦ ಅಡಿ' ಎಂದಳು ಒಬ್ಬ ಹುಡುಗಿ.

'೧೦೦ ಅಡಿ? ನೀನೇಕೆ ಅದನ್ನು ಅಳತೆ ಮಾಡಿ ನೋಡಬಾರದು?'ಎಂದೆ.

ಆ ಹುಡುಗಿ ಅಳತೆ ಪಟ್ಟಿಯಿಂದ ಅಳೆಯಲು ಶುರು ಮಾಡಿದಳು. ಮೊದಲು ಉದ್ದ, ಬಳಿಕ ಅಗಲ. ಆಮೇಲೆ ಅದನ್ನು ಕರಿಹಲಗೆಯ ಮೇಲೆ ಬರೆದು ಮೊತ್ತ ಎಷ್ಟು ಎಂದು ನೋಡಿದಳು.

'ನೀನ್ಯಾಕೆ ಅವುಗಳನ್ನು ಕೂಡಿಸುತ್ತಿದ್ದೀಯಾ?' ಎಂದು ಕೇಳಿದೆ.

'ಒಟ್ಟು ಎಷ್ಟು ಎಂದು ತಿಳಿಯಲು ಎಂದವಳೇ, 'ಓಹ್ ನಾನು ಒಂದರಿಂದ ಒಂದನ್ನು ಕಳೆಯಬೇಕಿತ್ತು' ಎಂದಳು.

'ಇಲ್ಲ ಇಲ್ಲ ಅವುಗಳನ್ನು ನಾವು ಕೂಡಿಸಬೇಕು' ಎಂದರು ಕೆಲವರು.

ಇದರಿಂದ ಸಂಪೂರ್ಣವಾಗಿ ತಾಳ್ಮೆ ಕಳೆದುಕೊಂಡ ಮತ್ತು ಚಿತ್ರಬಿಡಿಸಲು ಕಾಯುತಿದ್ದ ವಿದ್ಯಾರ್ಥಿಯೊಬ್ಬ, 'ಟೀಚರ್ ನೀವು ನಮಗೆ ಕಲೆ ಹೇಳಿಕೊಡಲು ಬಂದಿದ್ದೀರೋ ಅಥವಾ ಗಣಿತವನ್ನೋ?' ಎಂದು ಕೇಳಿಯೇಬಿಟ್ಟ.

'ಒಂದು ದಿನ, ನಾವು ಶಾಲೆಯ ಗೋಡೆಯಲ್ಲಿ ದೊಡ್ಡದಾದ ಚಿತ್ರವನ್ನು ಬಿಡಿಸಬೇಕಾಗಿಬರಬಹುದು. ಈಗಲೇ ನೀವು ಅದಕ್ಕೆ ಎಷ್ಟು ಪ್ರಮಾಣದ ಬಣ್ಣ ಬೇಕಾದೀತು ಎಂದು ಲೆಕ್ಕ ಹಾಕಿ ಬಿಡಿ. ನಿಮ್ಮ ಪುಸ್ತಕದ ಹಾಳೆಗಳಿವೆಯಲ್ಲ? ಈ ಗೋಡೆಗೆ ಎಷ್ಟು ಹಾಳೆಗಳು ಬೇಕಾಗಬಹುದು?' ಎಂದು ಪ್ರಶ್ನಿಸಿದೆ.

ಆಗ ಮಕ್ಕಳು ತಾವು ಹಿಂದೆಂದೂ ಕಂಡರಿಯದ ಹೊಸ ವಿದ್ಯಮಾನವನ್ನು ಕಂಡುಕೊಂಡಂತೆ, 'ನಾವು ಅಳತೆ ಮಾಡಿಟ್ಟುಕೊಂಡದ್ದನ್ನು ಗುಣಿಸಬೇಕು' ಎಂದರು.

ಕಲೆ ಎಂಬುದು ನಮ್ಮ ಜೀವನದ ಅವಿಭಾಜ್ಯ ಅಂಗ. ಅದನ್ನು ಕಲಿಕೆಯ ಪ್ರಮುಖ ಅಂಗವಾಗಿ ನಾವು ಪರಿಗಣಿಸಬೇಕು. ಕಲಾ ವಸ್ತುಗಳು ಮತ್ತು ಕಲಾಕೃತಿಗಳು ಈ ಬೃಹತ್ ಪ್ರಕ್ರಿಯೆಯ ಪೂರಕ ಫಲಿತಾಂಶಗಳಾಗಿವೆ. ಜ್ಞಾನದ ಅನ್ವೇಷಣೆ ಮತ್ತು ಪ್ರಪಂಚದ ತಿಳಿವಳಿಕೆಯು ವಿಜ್ಞಾನ ಅಥವಾ ತತ್ವಶಾಸ್ತ್ರದಲ್ಲಿರುವಂತೆ ಕಲೆಯಲ್ಲಿಯೂ ಪ್ರೇರಕವಾಗಿದೆ. ಯಾವುದೇ ಸಂಸ್ಕೃತಿಯು ಸಂಸ್ಕೃತಿಯು ಅರ್ಥಪೂರ್ಣವಾಗಿ ಬೆಳೆಯಬೇಕಾದರೆ ಇದನ್ನು ಗುರುತಿಸುವುದು ಬಹಳ ಮುಖ್ಯ.

**ಮಾಳವಿಕಾ ರಾಜ್ ನಾರಾಯಣ್:** ದೃಶ್ಯ ಕಲಾವಿದೆಯಾಗಿರುವ ಮಾಳವಿಕಾ, ಪ್ರಸ್ತುತ ತಮ್ಮ ಫೆಲೋಷಿಪ್ ಕಾರ್ಯಕ್ರಮದಡಿ ಕರ್ನಾಟಕದ ಯಾದಗಿರಿಯಲ್ಲಿ ಅಜೀಂಪ್ರೇಮ್ಜಿ ಶಾಲೆಯಲ್ಲಿ ಕಲಾಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನ ಕರ್ನಾಟಕ ಚಿತ್ರಕಲಾಪರಿಷತ್ತಿನ ಚಿತ್ರಕಲೆ ವಿಭಾಗದಿಂದ ಪದವೀಧರರಾದ ಬಳಿಕ, ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದಿಂದ ಲಲಿತ ಕಲಾ ವಿಭಾಗದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅವರ ಸಂಪರ್ಕಕ್ಕೆ: malavika.rajnarayan@azimpremji foundation.org